**- 6 -**

**ಸಿ.ಸಿ. ಸಂಖ್ಯೆ 5844 / 2023**
**ಪಿ.ಡಬ್ಲೂ -01**

**ದಿನಾಂಕಃ 19.03.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ ಜಿ ಹೆಚ್ ಎಂ. ಆರೋಪಿ ಪರ** ವಕೀಲರಿಂದ **.**

ಎಲ್ಲಿಯವರೆಗೂ ವಿದ್ಯಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಎಸ್ ಎಸ್ ಎಲ್ ಸಿ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಚೆನ್ನಾಗಿ ಬರುತ್ತದೆ ಎಂದರೆ ಸಾಕ್ಷಿ ಕನ್ನಡಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಲು ಹಾಗೂ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನೇ ಎಂದು ನುಡಿಯತ್ತಾರೆ. ನೀವು ಏನು ಕೆಲೇಸ ಮಾಡುತ್ತೀರಿ ಎಂದರೆ ಸಾಕ್ಷಿ ಇಟ್ಟಿಗೆ ಮತ್ತು ಜಲ್ಲಿಯ ದಳ್ಳಾಳಿ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯಲ್ಲಿ ಎಷ್ಟು ಜನರು ಇದ್ದಾರೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಪತ್ನಿ ಮಾತ್ರ ಇದ್ದು ಮಕ್ಕಳು ಬೇರೆ ಇದ್ದಾರೆ ಎಂದು ನುಡಿಯುತ್ತಾರೆ. ನಿಮಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 3 ಜನ ಸದರಿಯವರು ರಾಜೀವ್ , ವಿನಯ್ ಕುಮಾರ್ ಮತ್ತು ಮಗಳು ರೇಖ ಎಂದು ನುಡಿಯುತ್ತಾರೆ. ನಿಮ್ಮ ಮಕ್ಕಳು ಬೇರೆ ವ್ಯಾಪಾರ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಿನಯ್ ಕುಮಾರ್ ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಕೆಇ ಬಿ ಕಾಂಟ್ರ್ಯಾಕ್ಟ್ ಮಾಡುತ್ತಾರೆ ಎಂದು ನುಡಿಯುತ್ತಾರೆ. ರಾಜೀವ್ ಊರಿನಲ್ಲಿ ಜಮೀನು ಮತ್ತು ಸೈಟುಗಳನ್ನು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮಕ್ಕಳು ಏನು ವ್ಯವಹಾರ ಮಾಡುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೆ ಎಂದರೆ ಸಾಕ್ಷಿ ಕೆಲವು ಗೊತ್ತು ಕೆಲವು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿಮ್ಮ ಮಕ್ಕಳು ತಿಂಗಳಿಗೆ ಎಷ್ಟು ಸಂಪಾದನೆ ಮಾಡುತ್ತಾರೆ ಎಂದು ನಿಮಗೆ ಗೊತ್ತಿರುತ್ತದೆಯೆ ಎಂದರೆ ಸಾಕ್ಷಿ ಅದನ್ನು ನನಗೆ ಹೇಳುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಇಟ್ಟಿಗೆ ಮತ್ತು ಜೆಲ್ಲಿ ದಳ್ಳಾಳಿ ವ್ಯಾಪಾರ ಮಾಡಲು ಪರವಾನಗಿ ಇಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಕಾರಣ ನಾವು ಯಾವಾಗಲೂ ಸದರಿ ಕೆಲಸ ಮಾಡುವುದಿಲ್ಲವೆಂದು ನುಡಿಯುತ್ತಾರೆ. ನಿಮ್ಮ ಎಲ್ಲಾ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡುತ್ತೀರೋ ಅಥವಾ ನಗದು ಮುಖಾಂತರ ಮಾಡುತ್ತೀರೋ ಎಂದರೆ ಸಾಕ್ಷಿ ಕೆಲವು ವ್ಯವಹಾರ ಬ್ಯಾಂಕ್ ಮುಖಾಂತರ ಹಾಗೂ ಕೆಲವು ವ್ಯವಹಾರ ನಗಧು ಮುಖಾಂತರ ಮಾಡುತ್ತೇನೆ ಎಂದು ನುಡಿಯುತ್ತಾರೆ. ನೀವು ಎಷ್ಟು ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೀರಿ ಎಂದರೆ ಸಾಕ್ಷಿ 2 ಬ್ಯಾಂಕ್ ನಲ್ಲಿ ಎಂದು ನುಡಿಯುತ್ತಾರೆ. ನಿಮ್ಮ ವರಮಾನ ಎಷ್ಟು ಎಂದರೆ ಸಾಕ್ಷಿ ತಿಂಗಳಿಗೆ 15-20 ಸಾವಿರ ಎಂದು ನುಡಿಯುತ್ತಾರೆ. ಸದರಿ 15-20 ಸಾವಿರ ಬ್ಯಾಂಕ್ ಗೆ ನೇರವಾಗಿ ಹೋಗುತ್ತದೆಯೆ ಎಂದರೆ ಸಾಕ್ಷಿ ಇಲ್ಲ ನಗಧವು ರೂಪದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಬಾಡಿಗೆ ರೂಪದಲ್ಲಿ ಹಾಗೂ ವ್ಯವಾಸಾಯ ರೂಪದಲ್ಲಿ ನಿಮಗೆ ಆದಾಯ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಅವರ ತಂದೆ ಮತ್ತು ನಾನು ಬಾಲ್ಯದಿಂದಲೂ ಸ್ನೇಹಿತರಿದ್ದು ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ತಂದೆಯ ನಡುವೆ ಕೇವಲ ಪರಿಚಯ ಇರುತ್ತದೆಯೋ ಅಥವಾ ಏನಾದರೂ ವ್ಯವಹಾರ ನಡೆದಿರುತ್ತದೆಯೋ ಎಂದರೆ ಸಾಕ್ಷಿ ಆರೋಪಿಯ ತಂದೆ ಲಾಡ್ಜ್ ಕಟ್ಟಲು ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ಲಾಡ್ಜ್ ಕಟ್ಟಲು ವ್ಯವಹಾರ ಮಾಡುವ ಮೊದಲು ಏನಾದರೂ ಹಣದ ವ್ಯವಹಾರ ಇತ್ತ ಎಂದರೆ ಸಾಕ್ಷಿ ರೂ. 10- 15 ಸಾವಿರ ತಗೆದುಕೊಳ್ಳುವುದು ಹಾಗೂ ನಾನು ಪಡೆಯುವುದು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನೀವು ಎಲ್ಲಾ ವ್ಯವಹಾರವನ್ನು ಆರೋಪಿಯ ತಂದೆಯ ಹತ್ತಿರವೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಆರೋಪಿಯ ಸಮ್ಮುಖದಲ್ಲಿಯೆ ಮಾಡಿರುತ್ತೇನೆ ಎಂದು ನುಡಿಯುತ್ತಾರ. ಆರೋಪಿಗೆ ನೀವು ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಆರೋಪಿಗೆ ಕೊಟ್ಟಿರುತ್ತಿರೋ ಅಥವಾ ಅವರ

ತಂದೆಗೆ ಕೊಟ್ಟಿರುತ್ತೀರೋ ಎಂದರೆ ಸಾಕ್ಷಿ ಆರೋಪಿಗೆ ಚೆಕ್ ಮುಖಾಂತರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾವು ನಗಧು ರೂಪದಲ್ಲೂ ಕೊಟ್ಟಿರುತ್ತೇನೆ ಸದರಿ ಹಣವನ್ನು ಆರೋಪಿ ಮತ್ತು ಅವರ ತಂದೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಮತ್ತು ಅವರ ತಂದೆಗೆ ಒಟ್ಟು ಎಷ್ಟು ಹಣ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಒಟ್ಟು 6 ಲಕ್ಷ ಎಂದು ನುಡಿಯುತ್ತಾರೆ. ಆರೋಪಿಗೆ ಹಾಗು ಅವರ ತಂದೆಯವರಿಗೆ ಎಷ್ಟು ಹಣ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಆರೋಪಿಗೆ 4 ಲಕ್ಷ ಹಾಗೂ ಅವರ ತಂದೆಗೆ 2 ಲಕ್ಷ ಕೊಟ್ಟಿರುತ್ತೇನೆ ಎಂದು ನುಡಿಯುತ್ತರೆ.

ಆರೋಪಿ ಮತ್ತು ಆತನ ತಂದೆ ನಿಮಗೆ ಯಾವಾಗ ಹಣ ಕೇಳಿದ್ದರು ಎಂದರೆ ಸಾಕ್ಷಿ 2018 ಮತ್ತು 2019 ನೇ ಇಸವಿಯಲ್ಲಿ ಕೇಳಿದ್ದು ದಿನಾಂಕ ಮತ್ತು ತಿಂಗಳು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಅವರ ತಂದೆ ಯಾವ ಉದ್ದೇಶಕ್ಕಾಗಿ ನಿಮಗೆ ಹಣ ಕೇಳಿರುತ್ತಾರೆ ಎಂದರೆ ಸಾಕ್ಷಿ ಲಾಡ್ಜ್ ಕಟ್ಟಲು ಎಂದು ನುಡಿಯುತ್ತಾರೆ. ನೀವು ಯಾವ ದಿನಾಂಕದಂದು ಆರೋಪಿಗೆ ಮತ್ತು ಅವರ ತಂದೆಗೆ ಹಣ ಕೊಟ್ಟಿರುತ್ತೀರಿ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ 2019 ನೇ ಇಸವಿಯ 3 ನೇ ತಿಂಗಳಿನಲ್ಲಿ ಚೆಕ್ ಮಖಾಂತರ ಆರೋಪಿಗೆ ಕೊಟ್ಟಿರುತ್ತೇನೆ ಎಂದು ನುಡಿಯತ್ತೂರೆ. ಆದರೆ ಅವರ ತಂದೆಗೆ ನಗಧು ರೂಪದಲ್ಲಿ ಕೊಟ್ಟಿದು ಯಾವ ದಿನಾಂಕ ಎಂದು ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಆರೋಪಿಯು ಹಣ ಕೇಳಿರುತ್ತಾರೆ ಮತ್ತು ಯಾವ ದಿನಾಂಕಂದು ನೀವು ಹಣ ಕೊಟ್ಟಿರುತ್ತೀರಿ ಎಂದು ದೂರನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತೀರಿ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ.ಆರೋಪಿಯ ತಂದೆಗೆ ನಗಧು ರೂಪದಲ್ಲಿ ಹಣ ಕೊಟ್ಟಿರುತ್ತೇನೆಎಂದು ಹೇಳಿದ್ದು ಚೆಕ್ ಮುಖಾಂತರ ಕೊಡಲು ತೊಂದರೆ ಇತ್ತೆ ಎಂದರ ಸಾಕ್ಷಿ ನಗಧು ಇತ್ತು ಆ ಕಾರಣದಿಂದ ಕೊಟ್ಟಿರುತ್ತೇನೆ ಎಂದು ನುಡಿಯತ್ತಾರೆ. ಅದೇ ರೀತಿ ಆರೋಪಿಗೆ ರೂ. 2ಲಕ್ಷ ನಗಧು ರೂಪದಲ್ಲಿ ಹಣ

ಕೊಟ್ಟಿರುತ್ತೇನೆ ಎಂದು ಹೇಳಿದ್ದು ಚೆಕ್ ಮುಖಾಂತರ ಕೊಡಲು ತೊಂದರೆ ಇತ್ತೆ ಎಂದರೇ ಸಾಕ್ಷಿ ನಗಧು ಇತ್ತು ಆ ಕಾರಣದಿಂದ ಕೊಟ್ಟಿರುತ್ತೇನೆ ಎಂದು ನುಡಿಯತ್ತಾರೆ.

ಆರೋಪಿಯ ತಂದೆ ಹೆಸರು ಏನು ಎಂದರೆ ಸಾಕ್ಷಿ ಎಂ ಎನ್ ವೇಣುಗೋಪಾಲ್ ಎಂದು ನುಡಿಯುತ್ತಾರೆ. ಸದರಿ ವೇಣುಗೋಪಾಲ್ ರವರಿಗೆ 2 ಲಕ್ಷ ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಅವರಿಂದ ಚೆಕ್ ಪಡೆದಿರುತ್ತೀರಾ ಎಂದರೆ ಸಾಕ್ಷಿ ಆಗ ಪಡೆದಿದ್ದಿರಲಿಲ್ಲ ಒಂದು ದಿನ ಸದರಿ ವೇಣುಗೋಪಾಲ್ ರವರು ತಮ್ಮ ಮಗನಿಂದ ರೂ. 2 ಲಕ್ಷದಂತೆ ಒಟ್ಟು 3 ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಮಾತುಕತೆ ಯಾಗಿರುತ್ತದೆ ಎಂದರೆ ಸಾಕ್ಷಿ ದಿನಾಂಕ 20 ಅಥವಾ 22ರ ಡಿಸೆಂಬರ್ 2022 ರಂದು ಎಂದು ನುಡಿಯುತ್ತಾರೆ. ಸದರಿ ಮಾತುಕತೆಯ ಸಮಯದಲ್ಲಿ ಯಾರು ಯಾರು ಇದ್ದಿರಿ ಎಂದರೆ ಸಾಕ್ಷಿ ನಾನು, ಆರೋಪಿ ಮತ್ತು ಅವರ ತಂದೆ ಎಂದು ನುಡಿಯುತ್ತಾರೆ. ಸದರಿ ರೂ. 6 ಲಕ್ಷ ಹಣ ಕೊಡವುದರ ಬಗ್ಗೆ ಏನಾದರೂ ಕರಾರು ಪತ್ರ ಅಥವಾ ದಾಖಲೆ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಅವರು ಚೆಕ್ ಒಂದನ್ನು ಕೊಟ್ಟಿದ್ದು ಬಿಟ್ಟರೆ ಬೇರೆ ಏನು ದಾಖಲೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ ಅನ್ನು ನಿಮಗೆ ಯಾರು ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆರೋಪಿಯೋ ದಿನಾಂಕ 22.12.2022 ರಂದು ದಿನಾಂಕಗಳನ್ನು ನಮೂದಿಸಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಚೆಕ್ಕುಗಳನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 2 ಚೆಕ್ಕು ಎಂದು ನುಡಿಯುತ್ತಾರೆ. ಯಾವ ಯಾವ ದಿನಾಂಕ ನಮೂದು ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 30.05.2023 ಹಾಗೂ ದಿನಾಂಕ 30.07.2023 ಎಂದು ನುಡಿಯುತ್ತಾರೆ. ಸದರಿ ಚೆಕ್ ನಲ್ಲಿ ದಿನಾಂಕ ಮಾತ್ರ ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಮೊತ್ತ ಮತ್ತು ಚೆಕ್ ಅನ್ನು ಅವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿಯ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ಗೊತ್ತಿರುತ್ತದೇಯೆ ಎಂದರೆ ಸಾಕ್ಷಿ ದಿನಾಂಕ ಗೊತ್ತಿರುವುದಿಲ್ಲ ಆದರೆ ನಾನು ಕಾಶಿಯಲ್ಲಿ ಇದ್ದೆನು ಎಂದು ನುಡಿಯುತ್ತಾರೆ. ಆರೋಪಿಯ ತಂದೆಯವರು ಏನು ವ್ಯವಹಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಬಸ್ ಏಜೆಂಟ್, ಉರಿಮಿಷನ್ ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಅವರ ತಿಂಗಳ ಮತ್ತು ವಾರ್ಷಿಕ ಆದಾಯ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮಗೆ ಯಾವ ಬ್ಯಾಂಕ್ ನ ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸ್ಟೇಟ್ ಬ್ಯಾಂಕ್ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕೆನರಾ ಬ್ಯಾಂಕ್ ನ ಚೆಕ್ಕು ಒಂದು ಇದ್ದು ಎರಡರಲ್ಲಿ ಒಂದು ಇರಬಹುದು ಎಂದು ನುಡಿಯುತ್ತಾರೆ. ಚೆಕ್ ನಲ್ಲಿ ಬರೆದಿರುವ ದಿನಾಂಕ ಮತ್ತು ಮೊತ್ತದ ಬರವಣಿಗೆಗಳಿಗೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಆದರೆ ಆರೋಪಿಯೇ ಎಲ್ಲಾ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಚೆಕ್ ಅನ್ನು hand wirtting expert ರವರಿಗೆ ಕಳುಹಿಸಲು ನಿಮಗೆ ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ಕಳುಹಿಸಬಹುದು ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ರೀತಿಯಿಂದ ಚೆಕ್ ಅನ್ನು ನಿಮಗೆ ಬರೆದಯಿಕೊಟ್ಟಿರುವುದಿಲ್ಲ ನೀವು ಹಣವನ್ನು ಲಪಟಾಯಿಸಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**